

# ಧಗೆಯು ಬರುತಿದೆ!

> ಸೆಕೆಗಾಲದಲ್ಲೂ ಮೈ ಬೆವರುವುದಿಲ್ಲ ಎಂಬ ಬಿರುದನ್ನು ಬೆಂಗಳೂರು ಈ ವರ್ಷ ಕಳೆದುಕೊಂಡಿದೆ. ಸುಮ್ಮನೆ ಕೂತಿದ್ದರೂ, ನಿಂತಿದ್ದರೂ, ಮಲಗಿದರೂ ಮೈ ಬೆವರುತ್ತಿದೆ. 'ಧಗೆಯು ಬರುತಿದೆ ಎನಗೆ ಧಗೆಯು ಬರುತಿದೆ' ಎಂಬ ಹಾಡು ಹಾಡುವಂತಾಗಿದೆ!

■ ಶ್ರೀರಂಜನಿ ಅಡಿಗ

'ಈ ವರ್ಷದಷ್ಟು ಸೆಕೆ ಯಾವ ವರ್ಷವೂ ಇರಲಿಲ್ಲ' ಎಂಬ ಪ್ರತಿವರ್ಷದ ಗೊಣಗು ಈ ವರ್ಷ ಹೆಚ್ಚು ಅರ್ಥಪೂರ್ಣವಾಗಿದೆ ಅನಿಸುತ್ತಿದೆ. 'ಬಿಸಿಲೇರಿದಂತೆ ಹೊರಗೆ ಜಾಸ್ತಿ ಓಡಾಡಬೇಡಿ' ಎಂದರೂ ಹೊರಗೆ ಮಾತ್ರವಲ್ಲ, ಮನೆಯೇ ಕಾದ ಕಾವಲಿಯಂತಾಗಿರುತ್ತದೆ. ಶರೀರಕ್ಕೆ ಬೆಂಕಿ ಹಚ್ಚಿದಂತೆ ಭಗಭಗ ಅನ್ನುತ್ತಿರುತ್ತದೆ; ಫ್ಯಾನಿನ ಸಂಖ್ಯೆ ಐದಕ್ಕೇರಿದರೂ ಸೆಕೆ ಸೋಲುವುದಿಲ್ಲ ಎನ್ನುತ್ತಿದೆ.

ಗೃಹಜ್ಯೋತಿ ವಿಧಿಸಿದ ಗಡಿ ಮೀರಬಾರದೆಂದು ಟೀವಿ, ಫ್ಯಾನು, ಗೀಸರುಗಳನ್ನು ಪಿಸುಕಿ ಪಿಸುಕಿ ಉಪಯೋಗಿಸಿ ಫ್ರೀ ಕರೆಂಟ್ ಪಡೆಯುತ್ತಿರುವವರು ಈಗ ಪೂರ್ತಿ ಬಿಲ್ ಪಾವತಿ ಮಾಡುವುದಾದರೂ ಸರಿಯೇ ಫ್ಯಾನ್ ಆಫ್ ಮಾಡುವುದನ್ನು ಮಾತ್ರ ಊಹಿಸಿಕೊಳ್ಳಲಾರರು. ಪಾಪ ಫ್ಯಾನುಗಳೂ ತಿರುಗೀ ತಿರುಗೀ ಸುಸ್ತಾಗಿ ಅವುಗಳೂ ಬೆವರಿಳಿಸುತ್ತಿವೆಯೇನೋ?

ಚಳಿಗಾಲದಲ್ಲಿ ಬೆಳಿಗ್ಗೆ ಏಳಾದರೂ ಏಳದಿರುವವರು, ವಾಕಿಂಗಿಗೆ ಮಫ್ಲರು, ಸ್ವೆಟರು, ಶಾಲು ಎಲ್ಲ ಸುತ್ತಿಕೊಂಡು ಹೋಗುವವರು ಈಗ ಈ ಎಲ್ಲ ಬಂಧನಗಳನ್ನು ಕಳಚಿಟ್ಟು ಬೆಳಿಗ್ಗೆ ಗಂಟೆ ಐದಾಗುವುದನ್ನೇ ಕಾಯುತ್ತಿರುವಂತೆ ವಾಕಿಂಗಿಗೆ ಹೊರಟುಬಿಡುತ್ತಿದ್ದಾರೆ. ಪಾರ್ಕಿನ ತಣ್ಣಗಿನ ಹವೆ ಆಸ್ವಾದಿಸುತ್ತಾ ತಣ್ಣಗಾಗಲು ಹಂಬಲಿಸುತ್ತಿದ್ದಾರೆ. ಆದರೆ ಅರ್ಧ ಗಂಟೆ ಕಳೆಯುತ್ತಲೇ ತಲೆಕೂದಲ ಅಡಿಯಿಂದ ಹಿಡಿದು ಹಿಮ್ಮಡಿವರೆಗೂ ದೇಹ ಬೆವರಿನಿಂದ ಒದ್ದೆಮುದ್ದೆ. ಚಳಿಗಾಲದಲ್ಲಿ 'ಚಳಿ ಚಳಿ ತಾಳೆನು ಈ ಚಳಿಯಾ' ಎಂದು ಹಾಡಿದವರೆಲ್ಲರೂ ಈಗ 'ಧಗೆಯು ಬರುತಿದೆ ಎನಗೆ ಧಗೆಯು ಬರುತಿದೆ' ಎಂಬ ಹಾಡಿಗೆ ಶಿಫ್ಟಾಗಿದ್ದಾರೆ.

ಇನ್ನು ಈ ಸೆಕೆಗೆ ಊಟವೂ ಸೇರದು, ತಿಂಡಿಯೂ ಸೇರದು. ನೀರೊಂದೇ ಸಾಕು ಎನಿಸುತ್ತಿರುತ್ತದೆ, ಆದರೆ ಈಗ ನೀರಿನ ಅಭಾವ ರಾಜ್ಯ, ದೇಶ, ಭಾಷೆಗಳ ಗಡಿ ಮೀರಿದ ಸಮಸ್ಯೆಯಾಗಿದೆ. 'ನಿಮ್ಮಲ್ಲಿ ಸೆಕೆ ಹೇಗಿದೆ?' ಎಂಬ ಲೋಕಾಭಿರಾಮದ ಪ್ರಶ್ನೆಯಂತೆ 'ನೀರು ಬರುತ್ತಿದೆಯೇ? ಸಾಕಾಗುತ್ತಿದೆಯೇ?' ಎಂಬುದು ಅಷ್ಟೇ ನಿರೀಕ್ಷಿತ ಕುಶಲೋಪರಿಯಾಗಿದೆ.

ರೇಷನ್ನಿನಲ್ಲಿ ನಿರ್ದಿಷ್ಟ ಸಮಯದಲ್ಲಿ ಮಾತ್ರ ಸಾಮಗ್ರಿಗಳನ್ನು ವಿತರಿಸುವಂತೆ ದೊಡ್ಡ ದೊಡ್ಡ ಅಪಾರ್ಟ್‌ಮೆಂಟುಗಳಲ್ಲಿ ನೀರು ಬಳಸಲೂ ಸಮಯವಿಟ್ಟಿದ್ದಾರಂತೆ. ಕುಡಿಯಲೇ ಬೇಕಾಗುವಷ್ಟು ನೀರಿಲ್ಲದಿರುವಾಗ ಈ ಸೆಕೆ ನೀಗಲು ಮನದಣಿಯುವಷ್ಟು ಸ್ನಾನ ಮಾಡಲೂ ಸರಕಾರದವರು ಕಂಡೀಶನ್ ಹಾಕಿದ್ದಾರೆ, ಹಾಗೆಯೇ ಕಾರು ತೊಳೆಯಲು, ತೋಟಕ್ಕೆ ನೀರು ಬಿಡಲು ಮರುಬಳಕೆಯ ನೀರನ್ನು ಬಳಸದಿದ್ದರೆ ದಂಡಂ ದಶಗುಣಂ ಎನ್ನುತ್ತಿದ್ದಾರೆ.

ಒಟ್ಟಿನಲ್ಲಿ ಜನರ ಸ್ಥಿತಿ ಸೆಕೆಯೊಂದಿಗೆ ನೀರಿನ ಅಭಾವದಿಂದಾಗಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ. ಸೆಕೆಗಾಲದಲ್ಲೂ ಮೈ ಬೆವರುವುದಿಲ್ಲ ಎಂಬ ಬಿರುದನ್ನು ಬೆಂಗಳೂರು ಈ ವರ್ಷ ಕಳೆದುಕೊಂಡಿದೆ. ಈಗ ಹೊರಗೆ ಹೋದರೆ ಅಥವಾ ಕೆಲಸ ಮಾಡಿದರೆ ಮಾತ್ರವಲ್ಲ, ಸುಮ್ಮನೆ ಕೂತಿದ್ದರೂ, ನಿಂತಿದ್ದರೂ, ಮಲಗಿದರೂ ಮೈ ಬೆವರುತ್ತಿದೆ. ಅಡುಗೆಮನೆಯಲ್ಲಿ ನಿಂತವರ ಕಷ್ಟ ಕೇಳುವುದೇ ಬೇಡ. ಅಡುಗೆ ಜೊತೆ ಅವರೂ ಬೇಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಸೆಕೆ ತೀವ್ರವಾದರೆ ಮಳೆ ಬರುವುದೆಂಬ ಕೀರ್ತಿಯ ಕಿರೀಟವನ್ನೂ ಕಳಚಿಟ್ಟಿದೆ. ಅಚ್ಚರಿಯೆಂಬಂತೆ ಕರಾವಳಿಯ ಸೆಕೆಯ ಜೊತೆ ಮೊದಲ ಸ್ಥಾನ ಪಡೆಯಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ. ಕಳೆದ ವರ್ಷ ಮುಂಗಾರಿಗಾಗಿ ಕೊಡೆ ಖರೀದಿಸಿ ಅದನ್ನು ಉಪಯೋಗಿಸದೆ ಒಳಗಿಟ್ಟವರು ಈಗ ಬಿಸಿಲಿನಿಂದ ರಕ್ಷಣೆ ಪಡೆಯಲು ಬೀರುವಿನಿಂದ ತೆಗೆದು ಬಳಸಲಾರಂಭಿಸಿದ್ದಾರೆ. ಅಂತೂ ಈ ನೆವದಲ್ಲಾದರೂ ಪೈಸಾ ವಸೂಲ್ ಆಯಿತಲ್ಲ ಎಂದುಕೊಂಡಿದ್ದಿರಬಹುದು.

ಹೋದ ವರ್ಷ ಜೂನ್/ಜುಲೈನಲ್ಲಿ ಕೆಲವು ದಿನಗಳ ಕಾಲ ಇಣುಕಿಹೋದ ಮಳೆ ನಂತರ ಲಾಂಗ್ ಲೀವ್ ತೆಗೆದುಕೊಂಡಿತು. ಆವತ್ತಿನಿಂದ ಸೂರ್ಯ ಓವರ್ ಟೈಮ್ ಡ್ಯೂಟಿ ಮಾಡಬೇಕಾದ ಜರೂರಿನಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಶಿವರಾತ್ರಿ ನಂತರ ಫೀಲ್ಡಿಗೆ ಇಳಿಯಬೇಕಾಗಿದ್ದ ಸೂರ್ಯ ಅವಧಿಗೆ ಮುಂಚೆ ಕಾರ್ಯಾಚರಣೆ ಚುರುಕು ಮಾಡಿದ್ದ. ಯಾವಾಗ ಅವನು ರಜೆ ಮೇಲೆ ಹೋಗುತ್ತಾನೋ, ವರ್ಷ ಯಾವಾಗ ತನ್ನ ಡ್ಯೂಟಿಗೆ ಮರಳುತ್ತಾಳೋ ಎಂಬ ಲೆಕ್ಕಾಚಾರಲ್ಲಿ ಬೆವರಿಳಿಸುತ್ತಲೇ ಜನರು ಆಕಾಶದತ್ತ ಕಣ್ಣು ನೆಟ್ಟಿದ್ದಾರೆ. ■